ಕರ್ನಾಟಕ ರಾಜ್ಯ ರಸ್ತೆ ಸಂಸ್ಥೆಯು ವಾಹನಗಳ ಬಣ್ಣ ಬದಲಾವಣೆ.

೮೬೦. ಶ್ರೀ ಜಿ. ರಾಜೂಗೌಡ (ಹನೂರು).— ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ವಿಷಯಗಳನ್ನು ತಿಳಿಸುವರೇ.

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಾಹನಗಳ ಈಗಿರುವ ಕೆಂಪು ಬಣ್ಣವನ್ನು ಬದಲಾಯಿಸುವ ಯೋಜನೆ ಸರ್ಕಾರದಲ್ಲಿದೆಯೇ ?

ಆ) ಹಾಗಿದ್ದಲ್ಲಿ ಅದರಿಂದ ಸರ್ಕಾರಕ್ಕೆ ಎಷ್ಟು ವೆಚ್ಚವಾಗುವುದು ?

ಶ್ರೀ ಜಿ. ಜಿ. ಆರ್. ಸಿಂಧ್ಯಾ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೆಳಗಾವಿ ನಗರಪಾಲಿಕೆಯು ನಿವೃತ್ತ ನಾಕರರಿಗೆ ೫೦% ಪಿಂಚಣಿ ಸೌಲಭ್ಯ ನೀಡುವ ಬಗ್ಗೆ.

೯೦೫. ಶ್ರೀ ಆರ್. ಎಸ್. ಪಠಾನೆ (ಬೆಳಗಾಂ).— ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೦ರ ರಿಟ್ ಅರ್ಜಿ ಸಂಖ್ಯೆ ೫೯೫:೪೧ (ಬಿ. ಎಸ್ ನಕಾರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ) ಮತ್ತು ೧೯೮೨ರ ರಿಟ್ ಅರ್ಜಿ ಸಂಖ್ಯೆ ೩೭೨೦೨ (ಹಿಂದುಳಿದ ಮತ್ತು ಸಣ್ಣ ನಿವೃತ್ತಿದಾರರ ಸಂಘ — ವಿರುದ್ಧ ರಾಜ್ಯ) ಸರ್ವಶ್ರೇಷ್ಠ ನ್ಯಾಯಾಲಯ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯಗಳ ನಿರ್ಣಯದಂತೆ ಎಷ್ಟು ಜನ ನಿವೃತ್ತಿದಾರರಿಗೆ ಬೆಳಗಾವಿ ನಗರಪಾಲಿಕೆಯು ೫೦% ಪಿಂಚಣಿಯನ್ನು ಕೊಟ್ಟಿದೆ.

ಆ) ಸದರಿ ನಗರಪಾಲಿಕಾ ನಿವೃತ್ತಿದಾರರಿಂದ ಈ ಪಿಂಚಣಿ ಸೌಲಭ್ಯ ನೀಡಲು ಯಾವುದಾದರೂ ಬೇಡಿಕೆ ಇದೆಯೇ,

ಇ) ದಿನಾಂಕ ೧೪-೧೨-೧೯೮೩ ರ ಆದೇಶ ಸಂಖ್ಯೆ ಎಫ್‌ಡಿ (ಎಸ್‌ಪಿಎಲ್) ೧೫೦ ಪಿಇಟಿ ೮೩. ಪ್ರಕಾರ ಪಿಂಚಣಿಯನ್ನು ಹುಬ್ಬಳ್ಳಿ — ಧಾರವಾಡ ನಗರಪಾಲಿಕೆ ಪಿಂಚಣಿದಾರರಿಗೆ ಕೊಟ್ಟಿರುವುದು ನಿಜವೆ ?

ಈ) ಬೆಳಗಾವಿ ನಗರಪಾಲಿಕೆಯು ಈ ಆದೇಶವನ್ನು ಪಿಂಚಣಿದಾರರಿಗೆ ವಿಸ್ತರಿಸುವ ಬಗ್ಗೆ ಠರಾವು ಪಾಸು ಮಾಡಿರುವುದು ನಿಜವೆ ?

ಉ) ಬೆಳಗಾವಿ ನಗರಪಾಲಿಕಾ ಪಿಂಚಣಿದಾರರ ಬೇಡಿಕೆಯ ವಿಳಂಬಕ್ಕೆ ಏನಾದರೂ ವಿಶೇಷ ಕಾರಣ ಗಳಿವೆಯೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಯಾರಿಗೂ ಇಲ್ಲ.

ಆ) ಬಂದಿದೆ.

ಇ) ಹೌದು.

ಈ) ಹೌದು.

ಉ) ಹೌದು.